





# ಕೇದಾರದ ಕಾಯಕಜೀವಿಗಳು

**ನಾವೇನೋ ಮಹಾನ್ ಸಾಹಸ ಮಾಡುವಂತೆ ಏದುಸಿರು ಬಿಡುತ್ತಾ ಬೆಟ್ಟ ಏರುತ್ತಿದ್ದರೆ ನೇಪಾಳೀ ಪಿಟ್ಟೂವಾಲಾಗಳು ದಿನಕ್ಕೆ ಒಂದೆರಡು ಸಲ ಮೇಲೆ – ಕೆಳಕ್ಕೆ ಯಾತ್ರಿಗಳನ್ನು ಅನಾಯಾಸವಾಗಿ ಹೊತ್ತು ಸಾಗಿಸುತ್ತಾರೆ.**

**ಅಮರಜಾ ಹೆಗಡೆ, ಮೈಸೂರು**
ಚಿತ್ರ: ಮಹಾಬಲೇಶ್ವರ ಎಂ.ಜಿ ಮತ್ತು ಲೇಖಕಿಯದ್ದು.

**ಕೇ**ದಾರನಾಥ ಹಿಮಾಲಯದ ಪವಿತ್ರ ಚಾರ್‌ಧಾಮಗಳಲ್ಲಿ ಅತ್ಯಂತ ದುರ್ಗಮ ಮತ್ತು ಏರಲು ಕಠಿಣ . ಹೃಷಿಕೇಶದಿಂದ ಬಸ್ಸಿನಲ್ಲಿ ಹೊರಟು ಸೋನ್‌ಪ್ರಯಾಗನ್ನು ತಲುಪಿದ ನಂತರ ಕೇದಾರನಾಥನ ದರ್ಶನಕ್ಕೆ 18 ಕಿ.ಮೀ.ಗಳ ಗಿರಿಶ್ರೇಣಿಗಳನ್ನು ಕಾಲ್ನಡಿಗೆಯಲ್ಲಿ ಏರಬೇಕು. ಅದು ಸಾಧ್ಯವಿಲ್ಲದವರಿಗಾಗಿ, ಕುದುರೆ, ಹೇಸರಕತ್ತೆ ಸವಾರಿ, ಡೋಲಿ, ಪಿಟ್ಟೂ ಹಾಗೂ ಹೆಲಿಕಾಪ್ಟರ್ ಮುಂತಾದ ವ್ಯವಸ್ಥೆಗಳು ಇವೆ.

ಕೇದಾರ ದರ್ಶನಕ್ಕೆ ಸ್ವತಃ ಬೆಟ್ಟವೇರುವ ಶ್ರದ್ಧಾಳುಗಳು ಒಂದೆಡೆ. ಕುದುರೆ, ಢೋಲಿ, ಪಿಟ್ಟೂ, ಹೆಲಿಕಾಪ್ಟರ್‌ಗಳನ್ನು ಆಶ್ರಯಿಸಿ ಕೇದಾರೇಶ್ವರನ ದರ್ಶನಗೈಯುತ್ತಿರುವವರು ಮತ್ತೊಂದೆಡೆ. ಕೇದಾರ ಯಾನ ಕೈಗೊಂಡ ನಾವು ಸೋನ್‌ಪ್ರಯಾಗದಿಂದ ಕಾಲ್ನಡಿಗೆಯಲ್ಲೇ ಪರ್ವತವನ್ನೇರಲು ತೊಡಗಿದೆವು. ಮೊದಲ ಐದಾರು ಕಿ.ಮೀ. ಕ್ರಮಿಸುವವರೆಗೆ, ಹಸಿರು ಪರ್ವತಗಳ ನಡುವೆ ಅಡಗಿ ಕುಳಿತಂತೆ ಕಾಣುತ್ತಿದ್ದ ಹಿಮರಾಶಿ. ಮೇಲಕ್ಕೆ ಏರಿದಂತೆಲ್ಲ, ಹಿಮ ನಮ್ಮನ್ನು ಆವರಿಸಿಕೊಳ್ಳುತ್ತಿತ್ತು. ಮುಗಿಲನ್ನೇ ಚುಂಬಿಸುವಂತಿದ್ದ ಬೃಹತ್ ಹಿಮಾಚ್ಛಾದಿತ ಪರ್ವತಗಳ ನಡುವಿನ ಕಣಿವೆಯಲ್ಲಿ, ಸ್ಫಟಿಕದಂತಹ ಸ್ವಚ್ಛಸುಂದರ ಮಂದಾಕಿನೀ ನದಿ ತನ್ನ ಲಾಸ್ಯಭರಿತ ನಡಿಗೆಯಲ್ಲಿ ಸಾಗುತ್ತಿದ್ದಳು.

ನಾವು ಅಲ್ಲಿಗೆ ಹೋದ ಸಮಯದಲ್ಲಿ, ಅಂದರೆ, ಮೇ ಎರಡನೆ ವಾರ,